

بسم اللهِ الرّحمٰن الرّحيم

# ಪವಿತ್ರ ಖುರ್‌ಆನಿನ ಮಹತ್ವ ಮತ್ತು ರಮಝಾನಿನೊಂದಿಗೆ ಅದರ ಅಭೇದ್ಯ ಸಂಬಂಧ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **11-07-14** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನವನ್ನು ತಿಲಾವತ್ ಮಾಡಿದರು:

شَهْرُ رَمَضَانَ الَّذِي أُنزِلَ فِيهِ الْقُرْآنُ هُدًى لِلنَّاسِ وَبَيِّنَاتٍ مِنْ الْهُدَى وَالْفُرْقَانِ فَمَنْ شَهِدَ مِنْكُمْ الشَّهْرَ فَلْيَصُمْهُ وَمَنْ كَانَ مَرِيضًا أَوْ عَلَى سَفَرٍ فَعِدَّةٌ مِنْ أَيَّامٍ أُخَرَ يُرِيدُ اللَّهُ بِكُمْ الْيُسْرَ وَلاَ يُرِيدُ بِكُمْ الْعُسْرَ وَلِتُكْمِلُوا الْعِدَّةَ وَلِتُكَبِّرُوا اللَّهَ عَلَى مَا هَدَاكُمْ وَلَعَلَّكُمْ تَشْكُرُونَ

*ಶಹರು ರಮಝಾನಲ್ಲಝೀ ಉನ್‌ಝಿಲ ಫೀಹಿಲ್ ಖುರ್‌ಆನು ಹುದನ್ ಲಿನ್ನಾಸಿ ವ ಬಯ್ಯಿನಾತಿನ್ ಮಿನಲ್ ಹುದಾ ವಲ್ ಫುರ್‌ಖಾನಿ ಫಮನ್ ಶಹಿದ ಮಿನ್‌ಕುಮುಶ್ಶಹರ ಫಲ್ ಯಸುಮ್‌ಹು ವ ಮನ್ ಕಾನ ಮರೀಝನ್ ಅವ್ ಅಲಾ ಸಫರಿನ್ ಫ ಇದ್ದತುನ್ ಮಿನ್ ಅಯ್ಯಾಮಿನ್ ಉಖರ್ ಯುರೀದುಲ್ಲಾಹು ಬಿಕುಮುಲ್ ಯುಸ್‌ರ ವಲಾ ಯುರೀದು ಬಿಕುಮುಲ್ ಉಸ್‌ರ ವಲಿ ತುಕ್‌ಮಿಲುಲ್ ಇದ್ದತ ವಲಿ ತುಕಬ್ಬಿರುಲ್ಲಾಹ ಅಲಾಮಾ ಹದಾಕುಮ್ ವ ಲಅಲ್ಲಕುಮ್ ತಶ್‌ಕುರೂನ್.*

ಅರ್ಥ: **ಸಕಲ ಮಾನವರಿಗೆ ಸನ್ಮಾರ್ಗ ದರ್ಶಕವಾದ, ಮಾರ್ಗದರ್ಶನ ಮತ್ತು ಸತ್ಯಾಸತ್ಯ ವಿವೇಚನೆಯ ಸ್ಪಷ್ಟವಾದ ಸಾಕ್ಷ್ಯಗಳಿಂದ ಕೂಡಿದ ಖುರ್‌ಆನ್ ಅವತೀರ್ಣವಾದ ಮಾಸವಾಗಿದೆ ರಮಝಾನ್. ಆದುದರಿಂದ ನಿಮ್ಮ ಪೈಕಿ ಯಾರಾದರೂ ಈ ಮಾಸವನ್ನು ಪಡೆದರೆ ಆತನು ಅದರಲ್ಲಿ ಉಪವಾಸ ಮಾಡಲಿ. ಆದರೆ ಯಾರಾದರೂ ರೋಗಿ ಅಥವಾ ಪ್ರಯಾಣಿಕನಾಗಿದ್ದಲ್ಲಿ ಬೇರೆ ದಿನಗಳಲ್ಲಿ ಸಂಖ್ಯೆಯನ್ನು ಪೂರ್ತಿಗೊಳಿಸಲಿ. ಅಲ್ಲಾಹನು ನಿಮಗೆ ಸೌಲಭ್ಯವನ್ನು ಇಚ್ಛಿಸುತ್ತಾನೆ. ನಿಮಗೆ ಕಷ್ಟಕೊಡಲು ಇಚ್ಛಿಸುವುದಿಲ್ಲ. (ಇದು) ನೀವು ಸಂಖ್ಯೆಯನ್ನು ಪೂರ್ಣಗೊಳಿಸಲಿಕ್ಕೂ ನಿಮಗೆ ಮಾರ್ಗದರ್ಶನ ಮಾಡಿದುದಕ್ಕಾಗಿ ಅಲ್ಲಾಹನ ಸ್ತುತಿ ಕೀರ್ತನೆ ಮಾಡಲಿಕ್ಕೂ ನೀವು ಕೃತಜ್ಞತೆ ತೋರಿಸಲಿಕ್ಕೂ ಆಗಿದೆ.** (ಪವಿತ್ರ ಖುರ್‌ಆನ್ 2:186)

ಪವಿತ್ರ ಖುರ್‌ಆನಿನ ಮಹತ್ವ, ಅದರ ಸ್ಥಾನಮಾನ, ಅದರ ಉಪದೇಶಗಳ ಪ್ರಕಾರ ವರ್ತಿಸುವುದರ ಆವಶ್ಯಕತೆ, ಯಾವ ರೀತಿ ಸತ್ಕರ್ಮಗಳನ್ನು ಅನುಷ್ಠಿಸಬೇಕು, ಈ ಗ್ರಂಥ ಯಾವ ಜನರಿಗೆ ಜೀವದಾಯಕವಾಗುವುದು, ಮಾನವನ ಜೀವಿತದಲ್ಲಿ ಪವಿತ್ರ ಖುರ್‌ಆನ್ ಬೀರುವ ಪ್ರಭಾವಗಳು ಯಾವುವು, ಒಟ್ಟಾರೆ ಹೇಳುವುದಾದರೆ ಇಂತಹ ಅಸಂಖ್ಯಾತ ವಿಷಯಗಳ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ನಮಗೆ ವಿವರಿಸಿ ಕೊಟ್ಟಿರುವನು. ಆದುದರಿಂದ ಈ ಮಹೋನ್ನತವಾದ ಶರೀಅತ್ ಗ್ರಂಥವನ್ನು ಅನುಸರಿಸಿ ಕಾರ್ಯೋನ್ಮುಖರಾಗಿ ನಮ್ಮ ಆಧ್ಯಾತ್ಮಿಕ, ಧಾರ್ಮಿಕ ಮತ್ತು ನೈತಿಕ ಅಭಿವೃದ್ಧಿಯನ್ನು ಗಳಿಸಬಹುದು. ಮಾತ್ರವಲ್ಲ ಲೌಕಿಕ ಅಭಿವೃದ್ಧಿಯನ್ನು ಸಹ ಗಳಿಸಬಹುದಾಗಿದೆ. ನಾನು ತಿಲಾವತ್ ಮಾಡಿದ ಪವಿತ್ರ ಖುರ್‌ಆನ್ ವಚನದಲ್ಲಿ ಅಲ್ಲಾಹನು ರಮಝಾನ್ ತಿಂಗಳೊಂದಿಗೆ ಪವಿತ್ರ ಖುರ್‌ಆನನ್ನು ಜೋಡಿಸಿ ಪವಿತ್ರ ಖುರ್‌ಆನಿನ ಅನುಗ್ರಹಗಳನ್ನು ರಮಝಾನ್‌ನೊಂದಿಗೆ ಅನುಬಂಧಿಸಿರುವನು. ರಮಝಾನಿನ ಸಂಬಂಧವನ್ನು ಪವಿತ್ರ ಖುರ್‌ಆನ್‌ನೊಂದಿಗೆ ಸ್ಥಾಪಿಸಿ ರಮಝಾನಿನ ಮಹತ್ವವನ್ನು ಇನ್ನಷ್ಟು ಹೆಚ್ಚಿನ ಮಟ್ಟದಲ್ಲಿ ಪ್ರಕಟಿಸಲಾಗಿದೆ.

شَهْرُ رَمَضَانَ الَّذِي أُنزِلَ فِيهِ الْقُرْآن **"ಶಹ್‌ರು ರಮಝಾನಲ್ಲಝೀ ಉನ್‌ಝಿಲ ಫೀಹಿಲ್ ಖುರ್‌ಆನ್"**

ಎಂದು ಹೇಳಿ ಈ ಅಂತಿಮ ಶರೀಅತ್ ಗ್ರಂಥವಾದ ಪವಿತ್ರ ಖುರ್‌ಆನ್ ರಮಝಾನ್‌ನೊಂದಿಗೆ ಸಂಬಂಧ ಹೊಂದಿದೆ ಎಂದು ಸ್ಪಷ್ಟಗೊಳಿಸಲಾಗಿದೆ. ಯಾವ ವ್ಯಕ್ತಿ ತನ್ನ ಸತ್ಯ ವಿಶ್ವಾಸದಲ್ಲಿ ಅಭಿವೃದ್ಧಿ ಉಂಟಾಗಬೇಕೆಂದು ಬಯಸುತ್ತಾನೋ, ಯಾವ ವ್ಯಕ್ತಿ ಈ ಅಂತಿಮವೂ ಪರಿಪೂರ್ಣವೂ ಆಗಿರುವ ಶರೀಅತ್ ಗ್ರಂಥವನ್ನು ಲೋಕದಲ್ಲಿ ಹರಡಬೇಕೆಂದು ಮತ್ತು ಲೋಕವು ಅದರ ಬಗ್ಗೆ ತಿಳಿವಳಿಕೆ ಹೊಂದಬೇಕೆಂದು ಬಯಸುತ್ತಾನೋ, ಯಾವ ವ್ಯಕ್ತಿ ತನ್ನನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಕಾಲದೊಂದಿಗೆ ಜೋಡಿಸಿಕೊಳ್ಳಲು ಪ್ರಯತ್ನಿಸುತ್ತಾನೋ, ಯಾವ ವ್ಯಕ್ತಿ ಅಲ್ಲಾಹನ ಸಾಮೀಪ್ಯಗಳಿಸಲು ಪ್ರಯತ್ನಿಸುತ್ತಾನೋ ಮತ್ತು **ಫ ಇನ್ನೀ ಖರೀಬ್** (ನಾನು ಸಮೀಪದಲ್ಲಿಯೇ ಇದ್ದೇನೆ) ಎಂಬ ಶಬ್ದವನ್ನು ಅಲ್ಲಾಹನಿಂದ ಆಲಿಸಲು ಬಯಸುತ್ತಾನೋ ಅವನು ರಮಝಾನ್ ಮತ್ತು ಪವಿತ್ರ ಖುರ್‌ಆನಿಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸಿಕೊಡಬೇಕು. ಪವಿತ್ರ ಖುರ್‌ಆನ್ ಮತ್ತು ರಮಝಾನ್ ತಿಂಗಳ ಪರಸ್ಪರ ಸಂಬಂಧವನ್ನು ಅರಿತುಕೊಳ್ಳಬೇಕು. ಇತರ ದಿನಗಳಲ್ಲೂ ತಿಂಗಳುಗಳಲ್ಲೂ ಈ ಸಂಬಂಧಗಳು ತುಂಬಾ ದೂರವಾಗಿರುತ್ತವೆ. ಆದರೆ, ರಮಝಾನ್ ತಿಂಗಳಲ್ಲಿ ಈ ಸಂಬಂಧವನ್ನು ಸಮೀಪಗೊಳಿಸಲಾಗಿದೆ. ಆದುದರಿಂದ ರಮಝಾನ್ ತಿಂಗಳಲ್ಲಿ ಗಳಿಸಬಹುದಾದ ಎಲ್ಲಾ ಅನುಗ್ರಹಗಳನ್ನು ಗಳಿಸಲು ಓರ್ವ ಸತ್ಯವಿಶ್ವಾಸಿ ಪ್ರಯತ್ನಿಸಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸಹ شَهْرُ رَمَضَانَ الَّذِي أُنزِلَ فِيهِ الْقُرْآن **"ಶಹ್‌ರು ರಮಝಾನಲ್ಲಝೀ ಉನ್‌ಝಿಲ ಫೀ ಹಿಲ್ ಖುರ್‌ಆನ್** ಎಂಬ ವಾಕ್ಯದಿಂದಲೇ ರಮಝಾನ್ ತಿಂಗಳ ಮಹತ್ವ ಪ್ರಕಟವಾಗುತ್ತದೆ ಮತ್ತು ಈ ಮಹತ್ವದ ಕಾರಣದಿಂದ ಉಪವಾಸಕ್ಕೆ ದೊರಕುವ ಪ್ರತಿಫಲ ಬಹಳ ಬೃಹತ್ತಾಗಿದೆ" ಎಂದು ಹೇಳಿರುವರು.

ಆದರೆ ಈ ಪ್ರತಿಫಲ ದೊರಕಬೇಕಾದರೆ ಪವಿತ್ರ ಖುರ್‌ಆನ್ ಮತ್ತು ಉಪವಾಸಗಳಿಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸಬೇಕಾದ ಅಗತ್ಯವಿದೆ. ಈ ಹಕ್ಕುಗಳನ್ನು ಈಡೇರಿಸುವುದು ಹೇಗೆಂದರೆ ಉಪವಾಸ ಅನುಷ್ಠಿಸುವಾಗ ಅದರೊಂದಿಗೆ ಪವಿತ್ರ ಖುರ್‌ಆನ್ ಪಾರಾಯಣ ಸಹ ಮಾಡಬೇಕು. ಪವಿತ್ರ ಖುರ್‌ಆನ್ ವಚನಗಳ ಬಗ್ಗೆ ಚಿಂತಿಸಬೇಕು. ಅದರ ತಫ್‌ಸೀರ್ (ವ್ಯಾಖ್ಯಾನ) ಗಳನ್ನು ಆಲಿಸಬೇಕು ಅಥವಾ ಓದಬೇಕು. ನನಗೆ ತಿಳಿಯಲು ಸಾಧ್ಯವಾದುದೇನೆಂದರೆ ಮತ್ತು ನಾನು ಪರಿಶೀಲಿಸಿದಾಗ ತಿಳಿದು ಬಂದುದೇನೆಂದರೆ ನಮ್ಮ ಜಮಾಅತಿನಲ್ಲಿ ಸಹ ದೊಡ್ಡ ಸಂಖ್ಯೆಯಲ್ಲಿ ಎಂತಹ ಜನರಿದ್ದಾರೆಂದರೆ ರಮಝಾನ್ ತಿಂಗಳಲ್ಲಿ ಸಹ ಅವರು ಪವಿತ್ರ ಖುರ್‌ಆನಿಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸಲು ಪ್ರಯತ್ನಿಸುವುದಿಲ್ಲ. ಅಂದರೆ, ಅವರು ಪೂರ್ಣ ಶ್ರದ್ಧೆಯಿಟ್ಟು ಪವಿತ್ರ ಖುರ್‌ಆನ್ ಪಠಿಸುವುದಿಲ್ಲ. ಅವರು ಮನಸ್ಸಿಲ್ಲದ ಮನಸ್ಸಿನಿಂದ ಒಂದಿಷ್ಟು ಓದುತ್ತಾರೆ. ಆದುದರಿಂದ ಈ ವಿಷಯದ ಬಗ್ಗೆ ಲಕ್ಷ್ಯ ನೀಡಬೇಕಾದುದು ಅತೀ ಆವಶ್ಯಕವಾಗಿದೆ.

شَهۡرُ رَمَضَانَ الَّذِيۡ أُنۡزِلَ فِيۡهِ الۡقُرۡآن **"ಶಹರು ರಮಝಾನಲ್ಲಝೀ ಉಂಝಿಲ ಫೀಹಿಲ್ ಖುರ್‌ಆನ್"**

ಎಂಬ ವಾಕ್ಯದ ಇನ್ನೊಂದು ಅರ್ಥ ಪವಿತ್ರ ಖುರ್‌ಆನ್ ರಮಝಾನ್ ತಿಂಗಳಲ್ಲಿ ಅವತೀರ್ಣಗೊಳ್ಳಲು ಪ್ರಾರಂಭವಾಯಿತು ಎಂದು ಸಹ ಆಗಿದೆ. ಪವಿತ್ರ ಖುರ್‌ಆನಿನ ಅವತೀರ್ಣ ಪ್ರಾರಂಭವಾದುದು ರಮಝಾನ್ ತಿಂಗಳಲ್ಲಾಗಿದೆ. ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹ ಹೀಗೆ ವರದಿ ಮಾಡಿದ್ದಾರೆ: ಪ್ರತಿ ವರ್ಷ ರಮಝಾನ್ ತಿಂಗಳಲ್ಲಿ ಪವಿತ್ರ ಖುರ್‌ಆನಿನ ಅಷ್ಟರ ತನಕ ಅವತೀರ್ಣಗೊಂಡ ಭಾಗಗಳನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಜೊತೆಗೂಡಿ ಹಝ್ರತ್ ಜಿಬ್ರೀಲ್ ಪುನರಾವರ್ತಿಸುತ್ತಿದ್ದರು. ಹಝ್ರತ್ ಪೈಗಂಬರರು(ಸ) ಮೃತರಾಗಲಿದ್ದ ವರ್ಷದ ರಮಝಾನ್ ತಿಂಗಳಲ್ಲಿ ಎರಡು ಸಾರಿ ಈರೀತಿ ಪವಿತ್ರ ಖುರ್‌ಆನ್ ಜೊತೆ ಸೇರಿ ಪಾರಾಯಣ ಮಾಡಲಾಗಿತ್ತು.

ಒಟ್ಟಿನಲ್ಲಿ , ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ನಡೆವಳಿಕೆ ಮತ್ತು ಅಲ್ಲಾಹನ ವಿಶಿಷ್ಟ ಇಚ್ಛೆ ಮೂಲಕ ನಮಗೆ ತಿಳಿದಿರುವುದೇನೆಂದರೆ ರಮಝಾನ್ ತಿಂಗಳಲ್ಲಿ ನಾವು ಕನಿಷ್ಠ ಒಂದು ಸಾರಿಯಾದರೂ ಪವಿತ್ರ ಖುರ್‌ಆನನ್ನು ಓದಿ ಮುಗಿಸಲು ಪ್ರಯತ್ನಿಸಬೇಕು. ಹಾಗೂ ನಾನು ಮೊದಲು ಹೇಳಿದ ಹಾಗೆ ಪವಿತ್ರ ಖುರ್‌ಆನನ್ನು ಅಧ್ಯಯನ ಸಹ ಮಾಡಬೇಕು. ಅದರ ಬಗ್ಗೆ ಚಿಂತಿಸಬೇಕು. ಆಗ ಮಾತ್ರ ನಾವು ಅಲ್ಲಾಹನು ಪವಿತ್ರ ಖುರ್‌ಆನ್ ಬಗ್ಗೆ ಹೇಳಿದ **ಹುದನ್‌ಲಿನ್ನಾಸ್** "ಸಕಲ ಮಾನವರಿಗೆ ಮಾರ್ಗದರ್ಶನ" ಎಂಬ ನಿರ್ದೇಶದ ಪ್ರಕಾರ ವರ್ತಿಸುವವರಾಗುವೆವು. ಪವಿತ್ರ ಖುರ್‌ಆನ್ ಮಾರ್ಗದರ್ಶನವಾಗುವುದು ಅದರಿಂದ ಮಾರ್ಗದರ್ಶನ ಪಡೆಯಲು ಪ್ರಯತ್ನಿಸುವವರಿಗೆ ಮಾತ್ರವಾಗಿದೆ. ಪವಿತ್ರ ಖುರ್‌ಆನ್ ಓದಿ ಅರ್ಥ ಮಾಡಿಕೊಳ್ಳದೆ ಅದರಿಂದ ಮಾರ್ಗದರ್ಶನ ಪಡೆಯಲು ಸಾಧ್ಯವಾಗಲಾರದು.

ಪವಿತ್ರ ಖುರ್‌ಆನ್ ಎಂತಹ ಪರಿಪೂರ್ಣ ಗ್ರಂಥವಾಗಿದೆ ಎಂದರೆ ಅದಕ್ಕೆ ಸಮಾನವಾದ ಬೇರೆ ಒಂದು ಗ್ರಂಥವಿಲ್ಲ. ಅದರಲ್ಲಿ ಪ್ರತಿಯೊಂದು ವಿಷಯವನ್ನು ಪೂರ್ಣವಾಗಿ ವಿವರಿಸಲಾಗಿದೆ. ಹಿಂದಿನ ಕಾಲದ ಎಲ್ಲಾ ಧಾರ್ಮಿಕ ಗ್ರಂಥಗಳ ತಪ್ಪುಗಳನ್ನು ಅದು ತೆಗೆದು ಹಾಕಿತು. ಪುರಾತನ ಗ್ರಂಥಗಳ ಕೊರತೆಗಳನ್ನು ಅದು ತುಂಬಿಸಿತು. ಅಲ್ಲಾಹನು ನಮ್ಮನ್ನು ಈ ಕಾಲದಲ್ಲಿ ಜನಿಸುವಂತೆ ಮಾಡಿ ನಮ್ಮ ಮೇಲೆ ಬಹಳ ದೊಡ್ಡ ಔದಾರ್ಯ ತೋರಿಸಿರುವನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವ ಭಾಗ್ಯವನ್ನು ಅವನು ನಮಗೆ ನೀಡಿದನು. ನಮಗೆ ಈ ಭಾಗ್ಯ ದೊರೆತ ಕಾರಣ ಅವರ ಮೂಲಕ ಪವಿತ್ರ ಖುರ್‌ಆನಿನ ಮಹತ್ವ ಮತ್ತು ಅದರ ಜ್ಞಾನ ಸಂಪತ್ತನ್ನು ಅರಿತುಕೊಳ್ಳುವ ಸಾಧ್ಯತೆಗಳನ್ನು ಅವನು ನಮಗೆ ಒದಗಿಸಿಕೊಟ್ಟನು. ಪವಿತ್ರ ಖುರ್‌ಆನಿನ ಜ್ಞಾನದ ಖಜಾನೆಗಳನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮ್ಮ ಮುಂದೆ ತೆರೆದಿಟ್ಟರು. ಅದರ ಸರಿಯಾದ ಅರಿವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಓದುವುದರಿಂದ ಮಾತ್ರ ದೊರಕಲು ಸಾಧ್ಯವಾಗುವುದು. ಈ ಸಂದರ್ಭದಲ್ಲಿ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪವಿತ್ರ ಖುರ್‌ಆನ್ ಬಗ್ಗೆ ವಿವರಿಸಿದ ಕೆಲವು ಉಲ್ಲೇಖಗಳನ್ನು ನಿಮ್ಮ ಮುಂದಿರಿಸುವೆನು. ಅವುಗಳ ಮೂಲಕ ಪವಿತ್ರ ಖುರ್‌ಆನಿನ ಮಹತ್ವಪೂರ್ಣವಾದ ಸ್ಥಾನದ ಬಗ್ಗೆ ತಿಳಿಯುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: "ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು **ಖಾತಮುನ್ನಬಿಯ್ಯೀನ್**(ಅತ್ಯಂತ ಶ್ರೇಷ್ಠ ಪ್ರವಾದಿ) ಎಂದು ಹೆಸರಿಸಿದ ಕಾರಣ ಅವರಿಗೆ ಅವತೀರ್ಣವಾದ ಗ್ರಂಥ ಸಹ **ಖಾತಮುಲ್ ಕುತುಬ್** ( ಸರ್ವ ಶ್ರೇಷ್ಠ ಗ್ರಂಥ) ಆಗಿ ಅದರಲ್ಲಿ ಎಲ್ಲಾ ವಿಧಗಳ ಪರಿಪೂರ್ಣತೆ ಇರಬೇಕಾಗಿದೆ. ವಾಸ್ತವಿಕವಾಗಿ ಆ ಪರಿಪೂರ್ಣತೆಗಳು ಅದರಲ್ಲಿವೆ. ಅಲ್ಲಾಹನ ವಾಣಿ ಅವತೀರ್ಣವಾಗುವ ವಿಧಾನ ಹೇಗಿದೆ ಎಂದರೆ ಒಬ್ಬ ವ್ಯಕ್ತಿಯಲ್ಲಿ ಪರಿಶುದ್ಧ ಶಕ್ತಿ ಮತ್ತು ಆಂತರಿಕ ಪರಿಶುದ್ಧಿ ಯಾವ ಮಟ್ಟದಲ್ಲಿ ಇರುತ್ತದೆಯೋ ಅಷ್ಟೇ ಪರಿಶುದ್ಧಿ ಮತ್ತು ಶಕ್ತಿ ಆತನಿಗೆ ಅವತೀರ್ಣವಾಗುವ ದೇವವಾಣಿಯಲ್ಲಿರುತ್ತದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಪರಿಶುದ್ಧ ಶಕ್ತಿ ಮತ್ತು ಆಂತರಿಕ ಪರಿಶುದ್ಧಿ ಅತ್ಯಂತ ಉನ್ನತ ಮಟ್ಟದ್ದಾಗಿದ್ದುದರಿಂದ ಮತ್ತು ಅಂತಹ ಶಕ್ತಿ ಯಾವ ಮನುಷ್ಯನಿಗೂ ಹಿಂದೆ ದೊರಕಿರಲಿಲ್ಲ ಮತ್ತು ಮುಂದೆ ದೊರಕಲಾರದಾದ ಕಾರಣ ಪವಿತ್ರ ಖುರ್‌ಆನ್ ಸಹ ಹಿಂದಿನ ಎಲ್ಲಾ ಗ್ರಂಥಗಳಿಗಿಂತ ಉನ್ನತ ಸ್ಥಾನದಲ್ಲಿದೆ. ಬೇರೆ ಯಾವ ವಾಣಿಯೂ ಆ ಮಟ್ಟಕ್ಕೆ ತಲಪಲಿಲ್ಲ. ಏಕೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಶಕ್ತಿ ಸಾಮರ್ಥ್ಯಗಳು ಮತ್ತು ಪರಿಶುದ್ಧ ಶಕ್ತಿ ಎಲ್ಲದಕ್ಕಿಂತ ಉನ್ನತ ಮಟ್ಟದಲ್ಲಿದ್ದವು. ಎಲ್ಲಾ ಶ್ರೇಷ್ಠತೆಗಳು ಅವರಲ್ಲಿ ಸಮಾವೇಶಗೊಂಡು ಕೊನೆಗೊಂಡಿದ್ದುವು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಅತ್ಯಂತ ಉನ್ನತ

ಬಿಂದುವನ್ನು ತಲಪಿದ್ದರು. ಆ ಸ್ಥಾನದಲ್ಲಿ ಅವರಿಗೆ ಅವತೀರ್ಣವಾದ ಪವಿತ್ರ ಖುರ್‌ಆನ್ ಸಹ ತಲಪಿತ್ತು. **ನುಬುವ್ವತ್‌ಗೆ** ಸಂಬಂಧಿಸಿದ ಎಲ್ಲಾ ಶ್ರೇಷ್ಠತೆಗಳು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರಲ್ಲಿ ಮುಕ್ತಾಯವಾದ ಹಾಗೆ ಅದ್ಭುತವಾಣಿಯ ಎಲ್ಲಾ ಶ್ರೇಷ್ಠತೆಗಳು ಪವಿತ್ರ ಖುರ್‌ಆನಿನಲ್ಲಿ ಮುಕ್ತಾಯಗೊಂಡವು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು **ಖಾತಮುನ್ನಬಿಯ್ಯೀನ್** ಆದ ಹಾಗೆ ಅವರಿಗೆ ಅವತೀರ್ಣವಾದ ಗ್ರಂಥ **ಖಾತಮುಲ್ ಕುತುಬ್** ಆಯಿತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಅವತೀರ್ಣವಾದ ಗ್ರಂಥ, ಉನ್ನತ ಮಟ್ಟದ ದೃಷ್ಟಿಯಲ್ಲೂ ಅದ್ಭುತವಾಣಿಯ ದೃಷ್ಟಿಯಲ್ಲೂ ಅತ್ಯಂತ ಉನ್ನತ ಬಿಂದುವನ್ನು ತಲಪಿದೆ. ಭಾಷೆಯ ವೈಶಿಷ್ಟ್ಯದಲ್ಲೂ ವಿಷಯಗಳ ಕ್ರಮ ಬದ್ಧತೆಯಲ್ಲೂ ಉಪದೇಶಗಳ ಪರಿಪೂರ್ಣತೆಯಲ್ಲೂ ಉಪದೇಶಗಳನ್ನು ಪಾಲಿಸುವಾಗ ದೊರಕುವ ಪ್ರತಿಫಲಗಳ ದೃಷ್ಟಿಯಲ್ಲೂ ಮತ್ತು ಇತರ ಯಾವ ರೀತಿಯಲ್ಲಿ ನೋಡಿದರೂ ಪವಿತ್ರ ಖುರ್‌ಆನಿನ ಶ್ರೇಷ್ಠತೆ ಕಾಣಿಸುತ್ತದೆ. ಅದರ ಅದ್ಭುತ ಸಾಬೀತಾಗುತ್ತವೆ. ಆದುದರಿಂದಲೇ ಪವಿತ್ರ ಖುರ್‌ಆನ್ ಒಂದು ವಿಶಿಷ್ಟ ವಿಷಯದಲ್ಲಿ ಮಾತ್ರ ಅದಕ್ಕೆ ಸಮವಾದುದನ್ನು ಸಾದರಪಡಿಸುವ ಬಗ್ಗೆ ಪಂಥಾಹ್ವಾನ ನೀಡಲಿಲ್ಲ. ಬದಲಾಗಿ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಅದಕ್ಕೆ ತುಲ್ಯವಾದುದನ್ನು ತರುವ ಪಂಥಾಹ್ವಾನ ಒಡ್ಡಿದೆ. ಅದು ಭಾಷೆಗೆ ಸಂಬಂಧಿಸಿ, ಅದರಲ್ಲಿ ಅಡಕವಾದ ವಿಷಯಗಳಿಗೆ ಸಂಬಂಧಿಸಿ, ಅದರಲ್ಲಿ ಅಡಕವಾದ ಭವಿಷ್ಯವಾಣಿಗಳು ಮತ್ತು ಅದೃಶ್ಯ ಸಮಾಚಾರಗಳ ಬಗ್ಗೆ ಸಹ ಆಗಬಹುದು. ಯಾವ ರೀತಿ ನೋಡಿದರೂ ಅದು ಅದ್ಭುತಕರವೇ ಆಗಿದೆ.''

ಪವಿತ್ರ ಖುರ್‌ಆನಿನ ಮಹತ್ವದ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೊಂದೆಡೆ ಈರೀತಿ ಹೇಳುತ್ತಾರೆ:

ನಮ್ಮಲ್ಲಿ ಪವಿತ್ರ ಖುರ್‌ಆನ್ ಇಲ್ಲದೆ ಇರುತ್ತಿದ್ದರೆ, ಹಾಗೂ ಹದೀಸುಗಳ ಸಂಗ್ರಹಗಳು ಮಾತ್ರ ನಮ್ಮ ವಿಶ್ವಾಸಗಳಿಗೆ ಆಧಾರವಾಗಿರುತ್ತಿದ್ದರೆ ನಾವು ನಾಚಿಕೆಯಿಂದ ಅನ್ಯ ಸಮುದಾಯಗಳ ಮುಂದೆ ಮುಖ ತೋರಿಸಲು ಸಾಧ್ಯವಾಗುತ್ತಿರಲಿಲ್ಲ. ನಾನು **''ಖುರ್‌ಆನ್''** ಎಂಬ ಶಬ್ದದ ಬಗ್ಗೆ ಯೋಚಿಸಿದೆ. ಈ ಅನುಗ್ರಹದಾಯಕ ಶಬ್ದದಲ್ಲಿಯೇ ಒಂದು ಭವ್ಯ ಭವಿಷ್ಯವಾಣಿ ಅಡಕವಾಗಿದೆ ಎಂದು ನನಗೆ ತಿಳಿಯಿತು. ಪವಿತ್ರ ಖುರ್‌ಆನ್ ಮಾತ್ರ ಪಠಿಸಲು ಯೋಗ್ಯವಾದ ಗ್ರಂಥವೆಂದೂ ಮುಂದಿನ ಕಾಲದಲ್ಲಿ ಇನ್ನಷ್ಟು ಹೆಚ್ಚು ಓದಲು ಯೋಗ್ಯವಾದ ಗ್ರಂಥವಾಗುವುದೆಂದೂ ಇತರ ಗ್ರಂಥಗಳು ಸಹ ಅದರೊಂದಿಗೆ ಓದಲ್ಪಡುವುದಾದರೂ ಇಸ್ಲಾಮಿನ ಗೌರವವನ್ನು ಕಾಪಾಡಲು ಮತ್ತು ಸುಳ್ಳು ಅಳಿಸಿ ಬಿಡಲು ಈ ಒಂದು ಗ್ರಂಥ ಮಾತ್ರ ಓದಲು ಅರ್ಹವಾದುದೆಂದೂ ನನಗೆ ಮನವರಿಕೆಯಾಯಿತು. ಅನ್ಯ ಗ್ರಂಥಗಳು ಸಂಪೂರ್ಣವಾಗಿ ಬಿಟ್ಟುಬಿಡಲು ಅರ್ಹವಾಗುವುವು. **'ಫುರ್‌ಖಾನ್'** ಎಂಬ ಶಬ್ದದ ಅರ್ಥ ಸಹ ಇದೇ ಆಗಿದೆ. ಅಂದರೆ ಸತ್ಯ ಮತ್ತು ಸುಳ್ಳುಗಳ ಮಧ್ಯೆ ವ್ಯತ್ಯಾಸವನ್ನು ತೋರಿಸಿಕೊಡುವ ಗ್ರಂಥ ಪವಿತ್ರ ಖುರ್‌ಆನ್ ಮಾತ್ರವಾಗಿದೆ. ಬೇರೆ ಯಾವುದೇ ವಚನವಾಗಲಿ ಮತ್ತು ಬೇರೆ ಯಾವುದೇ ಗ್ರಂಥವಾಗಲಿ ಇಂತಹ ಯೋಗ್ಯತೆ ಹೊಂದಿರಲಾರವು. ಆದುದರಿಂದ ಇತರ ಎಲ್ಲಾ ಗ್ರಂಥಗಳನ್ನು ಬಿಟ್ಟು ಹಗಲು ರಾತ್ರಿ ಅಲ್ಲಾಹನ ಈ ಗ್ರಂಥವನ್ನು ಓದಿರಿ. ಪವಿತ್ರ ಖುರ್‌ಆನನ್ನು ಪರಿಗಣಿಸದೆ ದಿನರಾತ್ರಿ ಅನ್ಯ ಗ್ರಂಥಗಳ ಕಡೆಗೆ ಬಾಗುತ್ತಾ ಇರುವವನು ವಿಶ್ವಾಸರಹಿತನಾಗಿದ್ದಾನೆ. ನಮ್ಮ ಜಮಾಅತಿನ ಜನರು ಪವಿತ್ರ ಖುರ್‌ಆನನ್ನು ಅಧ್ಯಯನ ಮಾಡಲು ಹೃತ್ಪೂರ್ವಕವಾಗಿ ಪರಿಶ್ರಮಿಸಬೇಕು. ಇತರ ವಚನಗಳನ್ನು ತಮ್ಮ ದೈನಂದಿನ ಅಧ್ಯಯನಕ್ಕೆ ಬಳಸಬಾರದು. ಕೆಲವರು ಹದೀಸುಗಳಿಗೆ ನೀಡುವ ಗೌರವ ಪವಿತ್ರ ಖುರ್‌ಆನಿಗೆ ನೀಡದಿರುವುದು ಬಹಳ ಖೇದಕರವಾಗಿದೆ. ಈ ಪವಿತ್ರ ಖುರ್‌ಆನ್ ಎಂಬ ಆಯುಧ ಎತ್ತಿಕೊಂಡರೆ ನಿಮಗೆ ಜಯಸಿಗುವುದು. ಈ ಪ್ರಕಾಶದ ಎದುರಿಗೆ ಯಾವ ಅಂಧಕಾರವೂ ನಿಲ್ಲಲಾರದು.

ಇನ್ನೊಂದೆಡೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಜಮಾಅತ್ ಸದಸ್ಯರನ್ನು ಉಪದೇಶಿಸುತ್ತಾ ಈರೀತಿ ಹೇಳುತ್ತಾರೆ: ''ನೀವು ಜಾಗರೂಕರಾಗಿರಿ, ಅಲ್ಲಾಹನ ಆಜ್ಞೆ ಮತ್ತು ಪವಿತ್ರ ಖುರ್‌ಆನಿನ ಮಾರ್ಗದರ್ಶನಕ್ಕೆ ವಿರುದ್ಧವಾಗಿ ನೀವು ಒಂದು ಹೆಜ್ಜೆ ಸಹ ಹಾಕಬೇಡಿರಿ. ನಾನು ಸತ್ಯವಾಗಿ ಹೇಳುತ್ತೇನೆ. ಪವಿತ್ರ ಖುರ್‌ಆನಿನ ಏಳುನೂರು ಆಜ್ಞೆಗಳಲ್ಲಿ ಒಂದು ಚಿಕ್ಕ ಆಜ್ಞೆಯನ್ನಾದರೂ ಅವಗಣಿಸುವವನು ತನ್ನ ಮೋಕ್ಷದ ಬಾಗಿಲನ್ನು ತನ್ನ ಸ್ವಂತ ಕೈಯಿಂದ ಮುಚ್ಚುತ್ತಾನೆ. ಯಥಾರ್ಥ ಮೋಕ್ಷದ ಮಾರ್ಗವನ್ನು ಪವಿತ್ರ ಖುರ್‌ಆನ್ ತೆರೆಯುತ್ತದೆ. ಉಳಿದ ಗ್ರಂಥಗಳು ಅದರ ನೆರಳಿನ ಹಾಗಿವೆ. ಆದುದರಿಂದ ನೀವು ಪವಿತ್ರ ಖುರ್‌ಆನನ್ನು ಲಕ್ಷ್ಯವಿಟ್ಟು ಓದಿರಿ. ಅದನ್ನು ಬಹಳ ಪ್ರೀತಿಸಿರಿ. ಅದನ್ನು ಎಷ್ಟು ಪ್ರೀತಿಸಬೇಕೆಂದರೆ ಬೇರೆ ಯಾವುದನ್ನೂ ಸಹ ನೀವು ಹಾಗೆ ಪ್ರೀತಿಸಿರಬಾರದು. ಏಕೆಂದರೆ ಅಲ್ಲಾಹನು ನನ್ನೊಂದಿಗೆ ಹೇಳಿದ್ದಾನೆ- **''ಅಲ್‌ಖೈರು ಕುಲ್ಲುಹೂ ಫಿಲ್‌ಖುರ್‌ಆನ್''** (ಎಲ್ಲಾ ರೀತಿಯ ಒಳಿತುಗಳು ಪವಿತ್ರ ಖುರ್‌ಆನ್‌ನಲ್ಲಿದೆ) ಇದೇ ಸತ್ಯವಾಗಿದೆ. ಪವಿತ್ರ ಖುರ್‌ಆನಿಗಿಂತಲೂ ಬೇರೊಂದಕ್ಕೆ ಅಗ್ರಸ್ಥಾನ ನೀಡುವವರ ಬಗ್ಗೆ ಖೇದವಾಗುತ್ತದೆ. ನಿಮ್ಮ ಎಲ್ಲಾ ವಿಜಯಗಳ ಮತ್ತು ಮೋಕ್ಷದ ಮೂಲ ಸ್ಥಾನ ಪವಿತ್ರ ಖುರ್‌ಆನ್ ಆಗಿದೆ. ನಿಮ್ಮ ಯಾವುದೇ ಧಾರ್ಮಿಕ ಆವಶ್ಯಕತೆಗೆ ಪರಿಹಾರ ಪವಿತ್ರ ಖುರ್‌ಆನ್‌ನಲ್ಲಿ ಲಭ್ಯವಾಗದಿರುವುದಿಲ್ಲ. ಪುನರುತ್ಥಾನ ದಿನದಂದು ನಿಮ್ಮ ಧರ್ಮ ವಿಶ್ವಾಸದ ಸತ್ಯಾಸತ್ಯತೆಯನ್ನು ನಿರ್ಣಯಿಸುವ ಒರೆಗಲ್ಲು ಪವಿತ್ರ ಖುರ್‌ಆನ್ ಆಗಿದೆ.''

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ''ಪವಿತ್ರ ಖುರ್‌ಆನಿನ ಮೂಲಕವಲ್ಲದೆ ನಿಮಗೆ ಮಾರ್ಗದರ್ಶನ ನೀಡಬಲ್ಲ ಗ್ರಂಥ ಆಕಾಶದ ಕೆಳಗೆ ಬೇರೊಂದಿಲ್ಲ. ಪವಿತ್ರ ಖುರ್‌ಆನಿನಲ್ಲಿ ಅಡಕವಾದ ಉಪದೇಶಗಳ ಬಗ್ಗೆ ಪ್ರಸ್ತಾಪಿಸದ ಗ್ರಂಥ ನಿಮಗೆ ಮಾರ್ಗದರ್ಶನ ನೀಡಲು ಶಕ್ತವಾಗಲಾರದು.

ಪವಿತ್ರ ಖುರ್‌ಆನ್‌ನಂತಹ ಅಮೂಲ್ಯ ಗ್ರಂಥವನ್ನು ನಿಮಗೆ ನೀಡಿ ಅಲ್ಲಾಹನು ನಿಮ್ಮನ್ನು ಬಹಳವಾಗಿ ಅನುಗ್ರಹಿಸಿರುವನು. ನಾನು ಸತ್ಯವಾಗಿ ಹೇಳುತ್ತೇನೆ– ನಿಮಗೆ ನೀಡಲ್ಪಟ್ಟಿರುವಂತಹ ಒಂದು ಗ್ರಂಥ ಕ್ರೈಸ್ತರಿಗೆ ನೀಡಲ್ಪಡುತ್ತಿದ್ದರೆ ಕ್ರೈಸ್ತ ಜನರು ದಾರಿ ತಪ್ಪಿ ಹೋಗುತ್ತಿರಲಿಲ್ಲ. ಯಹೂದಿಯರಿಗೆ ತೌರಾತ್‌ನ ಬದಲಾಗಿ ನಿಮಗೆ ನೀಡಲ್ಪಟ್ಟಂತಹ ಅನುಗ್ರಹವನ್ನು ನೀಡಿರುತ್ತಿದ್ದರೆ ಅವರ ಪೈಕಿ ಕೆಲವು ಪಂಗಡಗಳು ಪುನರುತ್ಥಾನವನ್ನು ನಿರಾಕರಿಸುತ್ತಿರಲಿಲ್ಲ. ಆದುದರಿಂದ ನೀವು ಈ ಅನುಗ್ರಹವನ್ನು ಗೌರವ ಭಾವದಿಂದ ಕಾಣಿರಿ. ಇದು ಅತ್ಯಂತ ಪ್ರಿಯವಾದ ಬಹುಮಾನವಾಗಿದೆ. ಇದು ಬಹಳ ದೊಡ್ಡ ಸಂಪತ್ತಾಗಿದೆ. ಪವಿತ್ರ ಖುರ್‌ಆನ್ ಅವತೀರ್ಣವಾಗದಿರುತ್ತಿದ್ದರೆ ಲೋಕವು ಒಂದು ಕೊಳಕು ಮುದ್ದೆಯಂತೆ ಇರುತ್ತಿತ್ತು. ಕೊಳಕು ಮಾಂಸದ ಖಂಡದ ಹಾಗೆ ಆಗುತ್ತಿತ್ತು. ಪವಿತ್ರ ಖುರ್‌ಆನ್ ಎದುರಿಗೆ ಇತರ ಎಲ್ಲಾ ಮಾರ್ಗದರ್ಶನಗಳೂ ನಿಸ್ಸಾರವಾಗಿವೆ.”

ಅವರು ಮತ್ತೂ ಹೇಳುತ್ತಾರೆ: “ಬಹುತೇಕ ಮುಸ್ಲಿಮರು ಪವಿತ್ರ ಖುರ್‌ಆನನ್ನು ಬಿಟ್ಟು ಬಿಟ್ಟಿದ್ದಾರೆಂಬುದು ನಿಜವೆ. ಆದರೆ ಪವಿತ್ರ ಖುರ್‌ಆನಿನ ಪ್ರಕಾಶ ಮತ್ತು ಅನುಗ್ರಹಗಳು ಯಾವಾಗಲೂ ಜೀವಂತವಾಗಿಯೂ ತಾಜಾ ಆಗಿಯೂ ಇರುವುದು. ಇದಕ್ಕೆ ಸಾಕ್ಷ್ಯವಾಗಿ ಈಗ ನಾನು ಕಳುಹಿಸಲ್ಪಟ್ಟಿರುವೆನು. ಅಲ್ಲಾಹನು ಯಾವಾಗಲೂ ಯೋಗ್ಯವಾದ ಕಾಲಗಳಲ್ಲಿ ತನ್ನ ದಾಸರನ್ನು ಪವಿತ್ರ ಖುರ್‌ಆನಿಗೆ ಬೆಂಬಲ ನೀಡಲು ಕಳುಹಿಸುತ್ತಾ ಇದ್ದನು. ಏಕೆಂದರೆ ಅವನು ವಾಗ್ದಾನ ಮಾಡಿದ್ದಾನೆ–

**ಇನ್ನಾ ನಹ್‌ನು ನಝ್ಝಲ್‌ನ ಝ್ಝಿಕ್‌ರ ವ ಇನ್ನಾಲಹೂ ಲ ಹಾಫಿಝೂನ್ – ‘ನಿಶ್ಚಯವಾಗಿಯೂ ನಾವೇ ಪವಿತ್ರ ಖುರ್‌ಆನ್ ಅವತೀರ್ಣಗೊಳಿಸಿದ್ದೇವೆ. ನಾವೇ ಅದನ್ನು ರಕ್ಷಿಸುವೆವು’** ಎಂದು. ಪವಿತ್ರ ಖುರ್‌ಆನ್ ಬಗ್ಗೆ ನೀಡಲಾದ ಈ ವಾಗ್ದಾನ ತೌರಾತ್ ಗ್ರಂಥದ ಬಗ್ಗೆಯಾಗಲೀ ಬೇರೆ ಗ್ರಂಥಗಳ ಬಗ್ಗೆಯಾಗಲೀ ನೀಡಲಾಗಿಲ್ಲ. ಆದುದರಿಂದ ಆ ಗ್ರಂಥಗಳಲ್ಲಿ ಮಾನವರ ಹಸ್ತಕ್ಷೇಪ ಉಂಟಾಗಿದೆ. ಪವಿತ್ರ ಖುರ್‌ಆನಿನ ಸಂರಕ್ಷಣೆಯ ಬಹಳ ದೊಡ್ಡ ಮಾರ್ಗವೇನೆಂದರೆ ಅದರ ಪ್ರಭಾವದ ಸಾಕ್ಷ್ಯಗಳು ಯಾವಾಗಲೂ ಹೊಸದಾಗಿ ಲಭಿಸುತ್ತಾ ಇರುತ್ತವೆ. ಯಹೂದಿಯರು ತೌರಾತನ್ನು ಸಂಪೂರ್ಣವಾಗಿ ಬಿಟ್ಟು ಬಿಟ್ಟಿರುವ ಕಾರಣ ಅವರಲ್ಲಿ ಅದರ ಪ್ರಭಾವಶಾಲಿ ಶಕ್ತಿ ಬಾಕಿಯಾಗಿ ಉಳಿದಿಲ್ಲ. ಅದು ಅವರ ಮೃತ್ಯುವನ್ನು ಸೂಚಿಸುತ್ತದೆ.”

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಹಳ ಒತ್ತಿಹೇಳಿ ಹೀಗೆ ಉಪದೇಶಿಸಿದರು: “ನಿಮಗೆ ಅತ್ಯಂತ ಆವಶ್ಯಕವಾದ ಒಂದು ಉಪದೇಶವೇನೆಂದರೆ ನೀವು ಪವಿತ್ರ ಖುರ್‌ಆನನ್ನು ನಿಷ್ಪ್ರಯೋಜಕ ವಸ್ತುವಿನ ಹಾಗೆ ಬಿಟ್ಟು ಬಿಡಬೇಡಿರಿ. ಅದರಲ್ಲಿ ನಿಮ್ಮ ಜೀವಿತವಿದೆ. ಯಾರು ಪವಿತ್ರ ಖುರ್‌ಆನಿಗೆ ಗೌರವ ನೀಡುತ್ತಾರೋ ಅವರು ಆಕಾಶದಲ್ಲಿ ಗೌರವಿಸಲ್ಪಡುವರು. ಯಾವುದೇ ಹದೀಸು ಮತ್ತು ಯಾವುದೇ ವಚನಗಳ ಮೇಲೆ ಪವಿತ್ರ ಖುರ್‌ಆನಿಗೆ ಅಗ್ರಸ್ಥಾನ ನೀಡುವವರು ಆಕಾಶದಲ್ಲಿ ಅಗ್ರಸ್ಥಾನ ಪಡೆಯುವರು. ಮಾನವರಿಗೆ ಭೂಮಿಯಲ್ಲಿ ಈಗ ಪವಿತ್ರ ಖುರ್‌ಆನಿನ ಹೊರತು ಬೇರೆ ಗ್ರಂಥವಿಲ್ಲ. ಮಾನವರಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಹೊರತು ಈಗ ಬೇರೆ ಶಿಫಾರಸುಗಾರನಾಗಲೀ ಸಂದೇಶವಾಹಕನಾಗಲೀ ಇಲ್ಲ.”

(ಜುಮುಅ ನಮಾಝ್ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಎಂ.ಟಿ.ಎ ಕಾರ್ಯಕರ್ತರಾಗಿದ್ದ ಕಲೀಮ್ ಅಹ್ಮದ್ ವಸೀಮ್ ಸಾಹೇಬರ ನಮಾಝೆ ಜನಾಝ ಹಾಝಿರ್ ಅನುಷ್ಠಿಸಿದರು. ಅವರು 54ನೆ ವಯಸ್ಸಿನಲ್ಲಿ ಹೃದಯಾಘಾತಕ್ಕೆ ತುತ್ತಾಗಿ 6–7–2014ರಂದು ನಿಧನ ಹೊಂದಿದ್ದರು. ಅಮೇರಿಕದಲ್ಲಿ ನಿಧನ ಹೊಂದಿದ ಮುಆಸಿಮ್ ಝುಕೀ ಬಶೀರುದ್ದೀನ್ ಸಾಹಿಬ್ ರವರ ನಮಾಝೆ ಜನಾಝ ಗಾಯಿಬ್ ಸಹ ಅನುಷ್ಠಿಸಿದರು. ಅವರು 22–6–2014ರಂದು 85ನೆ ವಯಸ್ಸಿನಲ್ಲಿ ನಿಧನ ಹೊಂದಿದ್ದರು. ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.)

---------------*****---------------

*Friday Sermon delivered by Hadrath Khaleefatul Masih Al Khamis*(atba)

*at Masjid Baithul Futhuh, London on 11-07-2014*

***Kannada Translation:*** M Ubeidullah

***Reviewed by:*** M P Ibrahim | ***Typing:*** U Basheer Ahmad

*Published By:* ***Kannada Khutuba Desk*** (comes under the **Kannada Isha'at Team**)

*Ahmadiyya Muslim Jama`at, Karnataka*

*Email*: **khutuba.kannada@gmail.com**